O.S 73/2010

Dw1

ದಿನಾಂಕ 09.10.2025 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್.ಎಸ್.ವಿ ವಕೀಲರಿಂದಃ

ನಾನು ಹತ್ತನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಈಗ ಗೃಹಿಣಿಯಾಗಿರುತ್ತೇನೆ. ನನ್ನ ಯಜಮಾನರು ಟ್ರಾನ್ಸ್‌ಪೋರ್ಟ್ ಬಿಸಿನೆಸ್ ಅನು ಮಾಡುತ್ತಾರೆ. ನನ್ನ ಸ್ವಂತ ಊರು ಶ್ರೀ ಕಂಠಪುರ. ಈ ದಾವಾಸ್ತಿಯನ್ನು ಹೊರತುಪಡಿಸಿ ಶ್ರೀಕಂಠಪುರದಲ್ಲಿ ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ, ಸಾಕ್ಷಿಯು ಮಂದುವರೆದು ನನ್ನ ಮಾವನ ಹೆಸರಿನಲ್ಲಿ ವ್ಯವಸಾಯದ ಜಮೀನು ಮತ್ತು ಮನೆಗಳು ಇವೆ ಎಂದು ನುಡಿದಿರುತ್ತಾರೆ. ಶ್ರೀಕಂಠಪುರದಲ್ಲಿ ನಮ್ಮ ವಿಳಾಸ ಯಾವುದು ಎಂದರೆ ಶ್ರಿಕಂಠಪುರ, ನಾಗಸಂದ್ರ ಅಂಚೆ, ಬೆಂಗಳೂರು ಉತ್ತರ ತಾಲ್ಲೂಕು ಎಂದು ಉತ್ತರಿಸಿರುತ್ತಾರೆ. ನಾವು ವಾಸ ಮಾಡುತ್ತಿರುವ ವಿಳಾಸ ಮತ್ತು ದಾವಾಸ್ತಿಯು ಒಂದೇ ಆಗಿರುತ್ತದೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ನಾನು 06-07 ವರ್ಷಗಳ ಹಿಂದೆ ಪಂಚಾಯಿತಿ ಚುನಾವಣೆಗೆ ಅಭ್ಯರ್ಥಿಯಾಗಿದ್ದು ಒಂದು ಭಾರಿ ಗೆದ್ದಿರುತ್ತೇನೆ. ಶ್ರೀಕಂಠಪುರದ ಪಂಚಾಯಿತಿ ರಾಜಕೀಯದಲ್ಲಿ ನಾನು ಇದ್ದೆ ಎಂದರೆ ಸರಿ. ಶ್ರೀಕಂಠಪುರದ ಪಂಚಾಯಿತಿಯ ಅಧಿಕಾರಿಗಳು ನನಗೆ ಪರಿಚಯ ಇರುತ್ತಾರೆ ಎಂದರೆ ಸರಿ.

ನಿಡಿ-01 ಅನ್ನು ಟಿ.ಉಮೇಶ್ ರವರು ನನಗೆ ದಾವಾಸ್ತಿಯಲ್ಲಿ ವಿಸ್ತೀರ್ಣ 10X25 ಕುರಿತು ಜಿಪಿಎ ಅನ್ನು ಬರೆದುಕೊಟ್ಟಿರುತ್ತಾರೆ. ನಿಡಿ-1 ರಲ್ಲಿ ವಿಸ್ತೀರ್ಣ 10X25 ಎಂದು ಬರೆದಿದೆ ಎಂದರೆ ಸರಿ. 2010 ನೇ ಇಸವಿಯಲ್ಲಿ ಸದರಿ ವಿಸ್ತೀರ್ಣ 10X25 ಆಸ್ತಿ ನನ್ನ ಸ್ವಾಧಿನಕ್ಕೆ ಬಂದಿರುತ್ತದೆ. ನಿಡಿ-01 ರಲ್ಲಿ ನನಗೆ ಸ್ವಾಧೀನವನ್ನು ಕೊಟ್ಟಿರಲಿಲ್ಲ. ನಿಡಿ-01 ರಲ್ಲಿ ಸ್ವಾಧೀನ ನೀಡಿರುತ್ತಾರೆ ಎಂದು ತಪ್ಪಾಗಿ ಬರೆದಿರುತ್ತಾರೆ ಎಂದರೆ ಸರಿ. ನಿಡಿ-01 ಅನ್ನು ಬರೆದುಕೊಡಲು ಟಿ.ಉಮೇಶ್

ರವರಿಗೆ ಯಾವ ಅಧಿಕಾರ ಇತ್ತು ಎಂದು ನನಗೆ ಗೊತ್ತಿಲ್ಲ. ಟಿ.ಉಮೇಶ್ ರವರಿಗೆ ಸದರಿ ಆಸ್ತಿಯು ಹೇಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2010 ನೇ ಸಾಲಿನಲ್ಲಿ ಟಿ.ಉಮೇಶ್ ರವರಿಂದ ನಾನು 10X25 ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿರುತ್ತೇನೆ.

ನಿಡಿ-03 ರ ಪ್ರಕಾರ ನಾನು ದಿನಾಂಕ 13.06.2011 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಯನ್ನು ಖರೀದಿಸುವ ಮುಂಚೆ ನಾನು ಕಾನೂನು ಸಲಹೆಯನ್ನು ಪಡೆದಿರುತ್ತೇನೆಯಾ ಎಂದರೆ ನನಗೆ ಗೊತ್ತಿಲ್ಲ, ನನ್ನ ಗಂಡ ಅದನ್ನು ನೋಡಿಕೊಳ್ಳುತಿದ್ದರು. 10X25 ವಿಸ್ತೀರ್ಣದ ಆಸ್ತಿಯು ಉಮೇಶ್ ರವರ ಹೆಸರಿನಲ್ಲಿದೆ ಎಂದು ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನಿಡಿ-03 ರಲ್ಲಿ ನಂಜುಂಡಯ್ಯರವರಿಂದ ಜಿಪಿಎ ಅನ್ನು ಪಡೆದುಕೊಂಡು ಅವರ ಪರವಾಗಿ ಟಿ.ಉಮೇಶ್ ರವರು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಬರೆದಿದೆ ಎಂದರೆ ಸರಿ. ಟಿ.ಉಮೇಶ್ ರವರಿಗೆ ನಂಜುಂಡಯ್ಯ ರವರು ಯಾವಾಗ ಜಿಪಿಎ ಅನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ನನ್ನ ಗಂಡ ವಿಚಾರಿಸಿರುತ್ತಾರೆ. ನಂಜುಂಡಯ್ಯರವರು ಟಿ.ಉಮೇಶ್ ರವರಿಗೆ ಬರೆದುಕೊಟ್ಟ ಜಿಪಿಎ ಅನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-01 ಅನ್ನು ರದ್ದುಪಡಿಸಿರುವುದಿಲ್ಲ. ಒಬ್ಬ ವ್ಯಕ್ತಿಯಿಂದ ಜಿಪಿಎ ಅನ್ನು ಪಡೆದುಕೊಂಡು ಜಿಪಿಎ ಹೋಲ್ಡರ್ ಇನ್ನೊಬ್ಬ ವ್ಯಕ್ತಿಗೆ ಜಿಪಿಎ ಅನ್ನು ಬರೆದುಕೊಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಡಿ-03 ರ ಸಮಯದಲ್ಲಿ ನಂಜುಂಡಯ್ಯರವರು ಬದುಕಿದ್ದರು. ಆ ಸಮಯದಲ್ಲಿ ನಂಜುಂಡಯ್ಯರವರು ಬದುಕಿದ್ದರು ಎಂದು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಿರುತ್ತೇನೆಯಾ ಎಂದರೆ ನನಗೆ ಗೊತ್ತಿಲ್ಲ. ನಂಜುಂಡಯ್ಯ ರವರಿಂದ ನೇರವಾಗಿ ಕ್ರಯಪತ್ರವನ್ನು ಬರೆಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿಡಿ-03 ರಲ್ಲಿ ದಿನಾಂಕ 10.05.1983 ರಲ್ಲಿ ಶರತ್‌ಲಾಲ್ ದಾಲ್ಮಿ ಯವರಿಂದ ನಂಜುಂಡಯ್ಯರವರು 10X25 ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿದ್ದಾರೆ ಎಂದು ಬರೆದಿದೆ ಎಂದರೆ ಸರಿ. ನಿಪಿ-11 ರ ಪ್ರಕಾರ ಖಾನೇಷುಮಾರಿ 36 ಮತ್ತು 42 ನೇ ನಂಬರುಳ್ಳ ಷೆಡ್ಯೂಲ್ ಅನ್ನು ನಂಜುಂಡಯ್ಯರವರು ದಶರತ್

ಲಾಲ್ ದಾಲ್ಮಿಯಾ ರವರಿಂದ ಖರೀದಿಸಿದ್ದಾರೆ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-11 ರ ಷೆಡ್ಯೂಲ್‌ನಲ್ಲಿ ಪೂರ್ವ್ ಪಶ್ಚಿಮಃ 140 ಅಡಿಗಳು ಮತ್ತು ಉತ್ತರ-ದಕ್ಷಿಣಃ 50 ಅಡಿಗಳು ಪೂರ್ವದ ಕಡೆ, 42 ಅಡಿಗಳು ಪಶ್ಚಿಮದ ಕಡೆ ಗೆ ಎಂದು ಬರೆದಿದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನಿಡಿ-03 ರಲ್ಲಿ ನಮೂದಾಗಿರುವ ದಾಖಲೆಯ ಸಂಖ್ಯೆ 1591/1982-83 ನಿಪಿ-11 ದಾಖಲೆ ಆಗಿರುತ್ತದೆ ಎಂದರೆ ಇರಬಹುದು. ನಿಡಿ-03 ಮತ್ತು ನಿಪಿ- 11 ಅನ್ನು ಪರಿಶೀಲನೆ ಮಾಡಿ ನೋಡಿದಾಗ ನಾವು ಖರೀದಿಸಿರುವ ಆಸ್ತಿಯ ಮೂಲ ದಾಖಲಾತಿ ನಿಪಿ-11 ಆಗಿರುತ್ತದೆ ಎಂದರೆ ಸರಿ.

ನಿಪಿ-11 ಷೆಡ್ಯೂಲ್‌ನಲ್ಲಿ ಪೂರ್ವದ ಕಡೆ ರಸ್ತೆ ಎಂದು ಬರೆದಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಈಗಲೂ ರಸ್ತೆಯೇ ಇದೆ ಎಂದು ಉತ್ತರಿಸಿರುತ್ತಾರೆ. ನಿಪಿ-09 ರ ಪ್ರಕಾರ ನಂಜುಂಡಯ್ಯ ರವರು ಸರಸ್ವತಿ ರವರಿಗೆ ದಿನಾಂಕ 26.11.1986 ರಲ್ಲಿ ಖಾನೇಷುಮಾರಿ ಸಂಖ್ಯೆ 36 ಮತ್ತು 42 ನೇ ಆಸ್ತಿಯ ಸಂಪೂರ್ಣ ವಿಸ್ತೀರ್ಣವನ್ನು ಮಾರಾಟಮಾಡಿದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನಿಪಿ-02 ರಂತೆ ಖಾನೇಷುಮಾರಿ ಸಂಖ್ಯೆ 36 ಮತ್ತು 42 ನೇ ಸ್ವತ್ತಿನ **ಉತ್ತರಾರ್ಧ ಭಾಗವನ್ನು** ಸದರಿ ಸರಸ್ವತಿಯವರು ದಿನಾಂಕ 06.04.2002 ರಲ್ಲಿ ತಿಮ್ಮಕ್ಕ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-02 ರಂತೆ ಖಾನೇಷುಮಾರಿ ಸಂಖ್ಯೆ 36 ಮತ್ತು 42 ನೇ ಸ್ವತ್ತಿನ **ದಕ್ಷಿಣಾರ್ದ ಭಾಗವನ್ನು** ಸದರಿ ಸರಸ್ವತಿಯವರು ದಿನಾಂಕ 06.04.2002 ರಲ್ಲಿ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರಸ್ವತಿರವರು ಅವರಿಗೆ ಸೇರಿದ ಸಂಪೂರ್ಣ ಆಸ್ತಿಯನ್ನು ಅರ್ಧ ಅರ್ಧ ಭಾಗ ಮಾಡಿ ತಿಮ್ಮಕ್ಕ ಮತ್ತು ನರಸಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಂಜುಂಡಯ್ಯರವರು ಮುಂದೆ ಭಾಗದ ಆಸ್ತಿಯನ್ನು ಸ್ವಂತ ಇಟ್ಟುಕೊಂಡು ಹಿಂದೆ ಭಾಗದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ, ಸದರಿ ಮುಂದೆ ಭಾಗದ ಆಸ್ತಿಯನ್ನು ನಾವು ಖರೀದಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

ದಿನಾಂಕ 26.11.1986 ರ ನಂತರ ನಂಜುಂಡಯ್ಯರವರ ಹೆಸರಿನಲ್ಲಿ 10X25 ವಿಸ್ತೀರ್ಣದ ಆಸ್ತಿಯು ಮುಂದುವರೆದಿದೆ ಎಂದು ನಾನು ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಯಾ ಎಂದರೆ ನನಗೆ ಗೊತ್ತಿಲ್ಲ. ನಾನು ಆ ರೀತಿಯಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ

ಸರಿಯಲ್ಲ. ಸರಸ್ವತಿರವರಿಗೆ ಮಾರಾಟ ಮಾಡಿದ ನಂತರ ನಂಜುಂಡಯ್ಯರವರ ಹೆಸರಿನಲ್ಲಿ ಯಾವುದೇ ಆಸ್ತಿಯು ಮುಂದುವರೆದಿರುವುದಿಲ್ಲ ಆದ್ದರಿಂದ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಡಿ-04 ಯಾವ ಆಸ್ತಿಗೆ ಸಂಬಂಧಪಟ್ಟ ದಾಖಲೆ ಎಂದರೆ ಗೊತ್ತಿಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**